ಅಧ್ಯಕ್ಷರು : ನೀವು ಅದರ ಬಗ್ಗೆ, ಆ ರೀತಿ ಅಪರಾಧಿ ಮನೋಭಾವನೆಯಿಂದೇನೂ ಮಾತನಾಡಬೇಕಾಗಿಲ್ಲ. ಮಂತ್ರಿಗಳಾಗಲೀ, ಶಾಸಕರಾಗಲೀ, ವಿರೋಧ ಪಕ್ಷದ ನಾಯಕರಾಗಲೀ ಕ್ರಿಕೆಟ್ ಮ್ಯಾಚ್ ಎಂದರೆ ಒಂದು ಅಪೂರ್ವವಾದಂಥ ಘಟನೆ. ನೀವು ಒಂದು ಸ್ಥಾನದಲ್ಲಿದ್ದೀರಿ ಎಂದು 4 ಟಿಕೆಟ್ ಬೇಕು, 5 ಟಿಕೆಟ್ ಬೇಕೆಂದು ಯಾರಾದರೂ ಕೇಳುವುದೇನೂ ದೊಡ್ಡ ತಪ್ಪಲ್ಲ. ನಿಮ್ಮ ಮಕ್ಕಳು ಇರುತ್ತಾರೆ, ನಿಮ್ಮ ಮಕ್ಕಳ ಸ್ನೇಹಿತರು ಇರುತ್ತಾರೆ. ನಿಮ್ಮ ಆಪ್ತರಿಗೆ ಹೇಳಿ ಕೊಡಿಸಿ ಎಂದು ಕೇಳುತ್ತಾರೆ. ಅಥವಾ ಯಾರೋ ಬೇಕಾದವರು ಇರುತ್ತಾರೆ. ಫ್ರೆಂಡ್ಸ್ ಇರುತ್ತಾರೆ. ಏನೋ 5-6 ಟಿಕೆಟ್ ತರಿಸಿ ಕೊಡುವುದರಿಂದ, ದೊಡ್ಡ ಅಪರಾಧ ಏನೂ ಮಾಡಿದಹಾಗೆ ಆಗುವುದಿಲ್ಲ. ದುಡ್ಡು ಕೊಟ್ಟು ಟಿಕೆಟ್ ತರಿಸಿಕೊಡತಕ್ಕಂಥಾದ್ದು. ಸಾರ್ವಜನಿಕ ಜೀವನದಲ್ಲಿದ್ದಾಗ ಇವೆಲ್ಲಾ ಸಹಜ. ಅದಕ್ಕೆ ಏಕೆ ನಾವು, Why should be become guilty.

ಶ್ರೀ ಜೆ.ಪಟೇಲ್ : ಆ ರೀತಿ ಬಂದವರಿಗೆ ನಾನೇನು ಹೇಳಿದ್ದೇನೆಂದರೆ, ನಿಮ್ಮ ಮನೆಯೊಳಗೆ ಟಿ.ವಿ. ನೋಡಿ, ಸ್ಟೇಡಿಯಂಗೆ ಹೋಗುವುದೇ ಬೇಕಾಗಿಲ್ಲ. ಟಿ.ವಿ. ಬಂದ್ ಆಗದ ಹಾಗೆ ಎಲೆಕ್ಟ್ರಿಸಿಟಿ ಕೊಡುತ್ತೇವೆಂದು ಹೇಳಿದ.

ಶ್ರೀ ವಾಟಾಳ್ ನಾಗರಾಜ್ : ಒಂದು ಸತ್ಯ ಏನೆಂದರೆ, ಉಪ ಮುಖ್ಯಮಂತ್ರಿಗಳಿಂದ ಒಂದು ಸ್ಪಷ್ಟ ಭರವಸೆ ಬಂತು. ಈ ಕ್ರಿಕೆಟ್ ಸಂದರ್ಭದಲ್ಲಿ ಏನೇ ಕಷ್ಟವಾದರೂ ಸಹಿತ ಕರೆಂಟ್ ಮಾತ್ರ ಕೊಡುತ್ತೇವೆಂದು ಅಕಸ್ಮಾತ್ ಶಾಸನ ಸಭೆಯಲ್ಲಿ ಒಂದೊಂದು ಸಾರಿ ಕರೆಂಟ್ ಕಟ್ಟುಹೋಗುತ್ತೆ. ಆಗ ಏನು ಮಾಡುತ್ತೀರಿ ?

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಚರ್ಚೆ

(ಮುಂದುವರೆದದ್ದು)

+ಶ್ರೀ ಮಾರುತಿ ರಾವ್ ಪವಾರ್(ನರಸಿಂಹರಾಜ) : ಸನ್ಮಾನ್ಯ ಸಭಾಧ್ಯಕ್ಷರೇ ರಾಜ್ಯಪಾಲರ ಭಾಷಣದ ವಂದನಾನಿರ್ಣಯದ ಮೇಲೆ ತಾವು ನನಗೆ ಕೊಟ್ಟಿರತಕ್ಕ ಅವಕಾಶದಲ್ಲಿ, ನಾನು ವ್ಯರ್ಥವಾಗಿ ಕೆಲವು ವಿಚಾರಗಳನ್ನು ಮಾತನಾಡದೇ, ಕೆಲವು ಮುಖ್ಯವಾದಂಥ ಅಂಶಗಳನ್ನು ಮಾತ್ರ ಪ್ರಮುಖವಾಗಿ ತಮ್ಮ ಮೂಲಕ ಸರ್ಕಾರ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಇವತ್ತು ನಮ್ಮರಾಜ್ಯಸರ್ಕಾರ ಹೇಗೆ ವಿಫಲತೆಯನ್ನು ಕಾಣುತ್ತಾ ಇದೆ ಎನ್ನುವ ಹಿನ್ನೆಲೆಯಲ್ಲಿ ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತಿರುವಂಥ ಪ್ರಮುಖವಾದ ಅಂಶವೆಂದರೆ, ನಮ್ಮ ಶಿಕ್ಷಣ ಮಂತ್ರಿಗಳ ಖಾತೆಯಿಂದ, ಖಾಸಗಿ ಶಿಕ್ಷಣ ಸಂಸ್ಥಗಳಿಗೆ, ಸರ್ಕಾರದಿಂದ ಒಂದು ನಿರ್ಬಂಧದ ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದಾರೆ. ಆ ಸುತ್ತೋಲೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥಗಳಲ್ಲಿ ಶಾಲೆಗಳ ಒಂದು ಕಟ್ಟಡ ಇರಬಹುದು, ಆ ಶಾಲೆಗಳನ್ನು ನಡೆಸತಕ್ಕ ವ್ಯವಸ್ಥೆ ಹೇಗಿರಬೇಕೆಂಬ ಒಂದು ಸುತ್ತೋಲೆಯನ್ನು ಸರ್ಕಾರದವರು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಕಳುಹಿಸಿಕೊಟ್ಟಿದ್ದಾರೆ. ಅದರ ಒಂದು ಪ್ರತಿಯ ಪ್ರಕಾರ, ಒಂದು ಖಾಸಗಿ ಶಿಕ್ಷಣ ಸಂಸ್ಥೆ ತನ್ನ ಕಟ್ಟಡ ಸಂಪೂರ್ಣ ಆರ್.ಸಿ.ಸಿ.ಯನ್ನು ಹೊಂದಿರಬೇಕು, ಪ್ರತಿ

10 ಮಕ್ಕಳಿಗೆ ಒಂದು ಕುಡಿಯುವ ನೀರಿನ ನಲ್ಲಿಯ ವ್ಯವಸ್ಥೆ ಮಾಡಿರಬೇಕು. 10 ಹೆಣ್ಣುಮಕ್ಕಳು ವಿದ್ಯಾರ್ಥಿಗಳು ಇರತಕ್ಕಂಥ ಶಾಲೆಗೆ ಒಂದು ಶೌಚಾಲಯ ಇರಬೇಕು, ಹಾಗೆಯೇ 25 ಮಕ್ಕಳಿಗೆ ಒಂದರಂತೆ ಒಂದು ಶೌಚಾಲಯ ಇರಬೇಕು, 50 ವಿದ್ಯಾರ್ಥಿಗಳು ಇರತಕ್ಕಂಥ ಶಾಲೆಗೆ ಒಂದು ಮೂತ್ರಾಲಯ ಇರಬೇಕು. 500 ಮಕ್ಕಳು ಓದತಕ್ಕ ಶಾಲೆಗೆ ಒಂದು ದೂರವಾಣಿಯ ವ್ಯವಸ್ಥೆ ಇರಬೇಕು. ಹೀಗೆ ಖಾಸಗಿ ಶಿಕ್ಷಣ ಸಂಸ್ಥೆಗೆ ನಮ್ಮ ಸರ್ಕಾರದ ಪರವಿಂದ ಒಂದು ನಿರ್ಬಂಧದ ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದಾರೆ. ಈಗ ನಾವು ಬೆಳೆಯುತ್ತಾ ಇರತಕ್ಕ ಯುಗದಲ್ಲಿ, ಇಂತಹ ಉತ್ತಮವಾದ ಸಲಹೆಗಳನ್ನು ಸರ್ಕಾರದವರು ಏನು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಕಳುಹಿಸಿದ್ದಾರೆ, ಇದನ್ನು ನಾವು ಸ್ವಾಗತಿಸಬೇಕಾಗುತ್ತದೆ. ಆದರೆ, ನಾವು ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಸರ್ಕಾರಕ್ಕೆ ತಮ್ಮ ಮೂಲಕ ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ. ನಾವು ಇನ್ನೊಬ್ಬರಿಗೆ ಏನು ಬೇಕಾದರೂ ಹೇಳುವುದಕ್ಕೆ ಸಾಧ್ಯವಿದೆ. ಆದರೆ, ನಮ್ಮ ಮೇಲಿರತಕ್ಕ ತಪ್ಪನ್ನು, ನಮ್ಮ ಮೇಲೆ ಹೆಚ್ಚಿನ ಹೊರೆಯನ್ನು ಇಟ್ಟುಕೊಂಡು, ನಾವು ಸುಲಭವಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಆರ್.ಸಿ.ಸಿ.ಇರತಕ್ಕ ಕಟ್ಟಡ ಇರಬೇಕು. 10 ಮಕ್ಕಳಿಗೆ ಕುಡಿಯುವ ನೀರಿನ ವ್ಯವಸ್ಥೆ ಇರಬೇಕು ಎನ್ನತಕ್ಕಂಥ ನಿರ್ಬಂಧ ಹಾಕುವಂಥ ಸಂದರ್ಭದಲ್ಲಿ ನಮ್ಮ ಸರ್ಕಾರಿ ಶಾಲೆಗಳ ವ್ಯವಸ್ಥೆ ಬಗ್ಗೆ ನಾವು ಗಮನಹರಿಸಬೇಕಾಗುತ್ತದೆ. ಮೈಸೂರು ನಗರದಂಥ, ನಗರ ಪ್ರದೇಶಗಳಲ್ಲಿ ಸರ್ಕಾರಿ ಶಾಲೆಗಳ ಪರಿಸ್ಥಿತಿ ಹೇಗಿದೆಯೆಂದರೆ, ನಾನು ಉದಾಹರಣೆ ಕೊಡಬೇಕಾದರೆ, ಕುರುವಾರಹಳ್ಳಿ ಎನ್ನತಕ್ಕಂಥ ಶಾಲೆಯಲ್ಲಿ, ಆ ಶಾಲಾ ಕಟ್ಟಡದ ಹೆಂಚುಗಳೇನಿವೆ, ಮಳೆ ಬಂದರೆ ಸೋರುವುದರ ಮೂಲಕ, ಅಲ್ಲಿರತಕ್ಕಂಥ ಮಕ್ಕಳು, ಒಂದು ಕೊಠಡಿಯಿಂದ, ಮತ್ತೊಂದು ಕೊಠಡಿಗೆ ಹೋಗುವುದು. ಮಳೆ ಇನ್ನೂ ಜೋರಾದರೆ, ಮಕ್ಕಳನ್ನು ಮನೆಗೆ ಕಳುಹಿಸತಕ್ಕ ಒಂದು ವ್ಯವಸ್ಥೆಯ ಮಟ್ಟದಲ್ಲಿ ಆ ಶಾಲಾ ಕಟ್ಟಡ ಇದೆ. ಹಾಗೆಯೇ ನಮ್ಮ ಮೈಸೂರು ನಗರದ ರಾಜೇಂದ್ರನಗರದಲ್ಲಿರತಕ್ಕ ಒಂದು ಸರ್ಕಾರಿ ಶಾಲೆಯಲ್ಲಿ, ಕುಡಿಯುವ ನೀರಿನ ನಲ್ಲಿಯೂ ಇಲ್ಲದಿರತಕ್ಕಂಥ ಪರಿಸ್ಥಿತಿ ಇದೆ. ನಾವು ದಲಿತರ ಬಗ್ಗೆ, ಹರಿಜನರ ಬಗ್ಗೆ, ಅವರ ಅಭ್ಯುದಯದ, ಜವಾಬ್ದಾರಿಯ ಕೆಲಸವನ್ನು ಬಹಳಷ್ಟು ಮಾಡುತ್ತಾ ಇದ್ದೇವೆಂದು ಸರ್ಕಾರದಿಂದ ಹೇಳುತ್ತೇವೆ. ಅಲ್ಲಿ ಅದಿಜಾಂಬವ ಎಂಬ ಒಂದು ಸರ್ಕಾರಿ ಶಾಲೆಯೇನಿದೆ, ಆ ಶಾಲೆಯಲ್ಲಿ ಕೊಠಡಿಗಳಿಲ್ಲದೆ ಒಂದು ದೊಡ್ಡ ಹಾಲ್‌ನಲ್ಲಿ 4 ತರಗತಿಗಳನ್ನು ನಡೆಸತಕ್ಕ ವ್ಯವಸ್ಥೆಯನ್ನು ಕಾಣುತ್ತೇವೆ. ಇನ್ನಿತರ ಕೆಲವು ಶಾಲೆಗಳಲ್ಲಿ 4-5 ತರಗತಿಗಳನ್ನು ಒಬ್ಬರೇ ಅಧ್ಯಾಪಕರು ನಡೆಸತಕ್ಕ ವ್ಯವಸ್ಥೆಯನ್ನು ಕಾಣುತ್ತೇವೆ. ಇವೆಲ್ಲದರ ಹಿನ್ನೆಲೆಯಲ್ಲಿ ನಮ್ಮ ಸರ್ಕಾರದ ಶಾಲೆಗಳನ್ನು, ನಾವು ಅಭಿವೃದ್ಧಿ ಮಾಡಲಾರದೆ, ಖಾಸಗಿ ಸಂಸ್ಥೆಗಳು ಹೀಗಿರಬೇಕು, ಹಾಗಿರಬೇಕು ಎಂದು ಹೇಳುವುದಕ್ಕೆ ನಮಗೇನು ಅಧಿಕಾರ ಇದೆ, ನಾವು ಹೇಗೆ ನಿರ್ಬಂಧವನ್ನು ಹೇರುವುದಕ್ಕಾಗುತ್ತದೆ ಎಂಬುದನ್ನು ತಮ್ಮ ಮೂಲಕ ಈ ಸಂದರ್ಭದಲ್ಲಿ ಸರ್ಕಾರಕ್ಕೆ ತೋರ್ಪಡಿಸುವುದಕ್ಕೆ ಇಚ್ಛಿಪಡುತ್ತೇನೆ. ಇವತ್ತು ಖಾಸಗಿ ಶಿಕ್ಷಣ ಸಂಸ್ಥೆಗಳು, ಹೀಗೆಯೇ ಇರಬೇಕು, ಹೀಗೆಯೇ ಇರಬೇಕು ಎಂದು ತಾವೇನು ನಿರ್ಬಂಧ ಹಾಕಿದ್ದೀರಿ, ದಯಮಾಡಿ, ನಮ್ಮ ಸರ್ಕಾರಿ ಶಾಲೆಗಳ ಬಗ್ಗೆಯೂ ಕೂಡ ಗಮನಹರಿಸಬೇಕಾಗುತ್ತದೆ. ಇವತ್ತು ನಾವೇನು ಅಯವ್ಯಯ ಮಂಡನೆ ಮಾಡುತ್ತಿದ್ದೇವೆ, ಇಂತಹ ಸಂದರ್ಭದಲ್ಲಿ, ಇಡೀ ರಾಜ್ಯದಲ್ಲಿರತಕ್ಕ ಸರ್ಕಾರಿ ಶಾಲೆಗಳನ್ನು

ಎಲ್ಲಿ ಶೌಚಾಲಯ ಇಲ್ಲ, ಎಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ಎಲ್ಲಿ ಶಾಲಾ ಕೊಠಡಿಗಳು ಇಲ್ಲ - ಇಂತಹ ವ್ಯವಸ್ಥೆಯನ್ನು ಇಡೀ ರಾಜ್ಯದಲ್ಲಿ ತರಿಸಿಕೊಂಡು, ಇದನ್ನು ಅಭಿವೃದ್ಧಿ ಮಾಡುವ ದೃಷ್ಟಿಯಿಂದ, ಈ ಸೌಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದ ಇಡೀ ರಾಜ್ಯದಲ್ಲಿರುವಂಥ ಎಲ್ಲಾ ಶಾಲೆಗಳಿಗೆ ಒಂದಷ್ಟು ಹಣವನ್ನು ಎತ್ತಿಟ್ಟು, ಇದನ್ನು ಅಭಿವೃದ್ಧಿ ಮಾಡಿ, ಈ ಸಮಸ್ಯೆಯನ್ನು ಬಗೆಹರಿಸಬೇಕೆನ್ನುವ ಒತ್ತಾಯವನ್ನು ಈ ಮೂಲಕ ನಾನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಹಾಗೆಯೇ ನಮ್ಮ ರಾಜ್ಯಪಾಲರ ಭಾಷಣದಲ್ಲಿ 17ನೇ ಅಂಶದಲ್ಲಿ ಒಂದು ವಿಚಾರವನ್ನು ಅವರು ಭಾಷಣದಲ್ಲಿ ತಿಳಿಸಿರುತ್ತಾರೆ. ಬೆಂಗಳೂರು ನಗರಕ್ಕೆ, ಕಾವೇರಿ 4ನೇ ಹಂತದ ನೀರಿನ ಪೂರೈಕೆಗೆ, ಜಪಾನಿನ ಒಂದು ಸಂಸ್ಥೆಯೊಂದಿಗೆ, 1070 ಕೋಟಿ ರೂಪಾಯಿಗಳ ಯೋಜನೆಯನ್ನಯ ನಾವು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುತ್ತೇವೆ ಎನ್ನತಕ್ಕಂಥ ಒಂದು ಮಾತನ್ನು, ರಾಜ್ಯಪಾಲರ ಭಾಷಣದಲ್ಲಿ ತಿಳಿಸಿದ್ದಾರೆ. ನಾನು ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯದ ಕೇಂದ್ರ ಬಿಂದುವಾಗಿರತಕ್ಕಂಥ, ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆಯನ್ನು ತಾವೇನು ಮಾಡುತ್ತಿದ್ದೀರಿ, ಇದು ನಾನೇನೂ ವಿರೋಧ ಮಾಡುತ್ತಾ ಇಲ್ಲ. ನಾನು ಸ್ವಾಗತವನ್ನು ಮಾಡುತ್ತೇನೆ. ಆದರೆ, ಇವತ್ತು ಶಾಸನ ಸಭೆಯಲ್ಲಿರತಕ್ಕ ಎಲ್ಲಾ ವಿಧಾನ ಸಭಾ ಸದಸ್ಯರು, ಎಲ್ಲಾರೂ ಮಾತನಾಡುವಂಥ ಸಂದರ್ಭದಲ್ಲಿ ತಮ್ಮ ಎಲ್ಲಾ ಕ್ಷೇತ್ರಗಳಲ್ಲೂ ಸಹ ನೀರಿನ ಸಮಸ್ಯೆ ಇದೆ, ಸಮಸ್ಯೆ ಇದೆ ಎನ್ನುವಂಥ ಪ್ರತಿಪಾದನೆಯನ್ನು ಎಲ್ಲಾ ವಿಧಾನ ಸಭಾಸದಸ್ಯರು ಮಂಡನೆ ಮಾಡಿದರೂ ಸಹ ಇವತ್ತು ಈ ಒಂದು ರಾಜ್ಯಪಾಲರ ಭಾಷಣದಲ್ಲಿ ಬೆಂಗಳೂರು ನಗರಕ್ಕೆ ಮಾತ್ರ, ಕುಡಿಯುವ ನೀರಿನ ವ್ಯವಸ್ಥೆ ಮಾಡಿದರೆ. ಇಡೀ ಕರ್ನಾಟಕಕ್ಕೆ ನಾವು ಕುಡಿಯುವ ನೀರಿನ ವ್ಯವಸ್ಥೆ ಮಾಡಿದಮಾಗೆ ಮಾಡಿಬಿಟ್ಟಿದ್ದೇವೆಂಬ ಹೆಗ್ಗಳಿಕೆಯನ್ನು ಭಾಷಣದಲ್ಲಿ ಅವರು ತೋರಿಸಿದ್ದಾರೆ. ಇವತ್ತಿನ ದಿವಸಗಳಲ್ಲಿ ಕೆಲವು ಪ್ರಮುಖ ನಗರ ಪ್ರದೇಶಗಳಲ್ಲಿಯೂ ಕೂಡ ಮೂರು ನಾಲ್ಕು ದಿವಸಗಳಿಗೊಮ್ಮೆ ಕುಡಿಯುವ ನೀರು ಸರಬರಾಜು ಮಾಡುತ್ತಿರುವುದನ್ನು ಕಾಣುತ್ತಿದ್ದೇವೆ. ಮೈಸೂರು ನಗರದ ನಜರ್‌ಬಾದ್ ಮತ್ತು ಉದಯಗಿರಿ ಬಡಾವಣೆಗಳಿಗೆ 5 ದಿವಸಗಳಿಗೊಮ್ಮೆ ಕುಡಿಯುವ ನೀರು ಕೊಡುತ್ತಿದ್ದಾರೆ. ಇನ್ನೂ ಕೆಲವು ಪ್ರದೇಶಗಳಲ್ಲಿ ಮಧ್ಯ ರಾತ್ರಿ 2 ಗಂಟೆಯಿಂದ 5 ಗಂಟೆವರೆಗೆ ನೀರು ಬಿಡುತ್ತಿದ್ದಾರೆ. ಮಧ್ಯ ರಾತ್ರಿ ನೀರು ಬಿಡುವುದರಿಂದ ರಾತ್ರಿ ಹೊತ್ತು ಮಲಗಿರುವ ಹೆಣ್ಣು ಮಕ್ಕಳು ಎದ್ದು ಬೀದಿ ನಲ್ಲಿಗಳಲ್ಲಿ ನೀರು ಹಿಡಿಯುವಂಥ ಪರಿಸ್ಥಿತಿ ಉಂಟಾಗಿದೆ. ಮೈಸೂರು ನಗರ ಮತ್ತು ಇತರೆ ಪಟ್ಟಣ ಪ್ರದೇಶಗಳಿಗೆ ಸರಿಯಾದ ರೀತಿಯಲ್ಲಿ ಕುಡಿಯುವ ನೀರು ಒದಗಿಸುವ ಬಗ್ಗೆ ಸರ್ಕಾರ ಗಮನಹರಿಸಬೇಕು. ಮೈಸೂರು ನಗರಕ್ಕೆ 8 ಎಂ.ಜಿ.ಕುಡಿಯುವ ನೀರು ಕೊಡುವ ಬಗ್ಗೆ ಆರೂವರೆ ಕೋಟಿ ರೂಪಾಯಿಗಳ ಒಂದು ಯೋಜನೆ ಮಾಡಲಾಗಿತ್ತು, ಆ ಯೋಜನೆಯನ್ನು ಮಾಡಿ ಬಹಳ ವರ್ಷಗಳಾಗಿವೆ ಆದರೂ ಇದುವರೆಗೂ ಆ ಯೋಜನೆಯನ್ನು ಪೂರ್ಣಗೊಳಿಸುವ ಕಾರ್ಯ ನಡೆಯುತ್ತಿಲ್ಲವಾದ್ದರಿಂದ ಮೈಸೂರು ನಗರದಲ್ಲಿ ಕುಡಿಯುವ ನೀರಿಗಾಗಿ ಹಾಹಾಕರ ಕಾಣುತ್ತಿದೆ. ಮೈಸೂರು ನಗರದ ಎಲ್ಲಾ ಬಡಾವಣೆಗಳಿಗೂ ಸೂಕ್ತ ರೀತಿಯಲ್ಲಿ ನೀರು ಕೊಡುವ ಬಗ್ಗೆ ಮೇಳಾಪುರ ಯೋಜನೆಯನ್ನು 70-80 ಕೋಟಿ ರೂಪಾಯಿಗಳ ಅಂದಾಜಿನಲ್ಲಿ ತಯಾರಿಸಲಾಗಿತ್ತು. ಬೆಂಗಳೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಸಲುವಾಗಿ 1070 ಕೋಟಿ ರೂಪಾಯಿಗಳ

ಅಂದಾಜನಲ್ಲಿ ಯೋಜನೆ ತಯಾರು ಮಾಡುವ ಸಂದರ್ಭದಲ್ಲಿ ಮೈಸೂರು ನಗರಕ್ಕೆ ಕುಡಿಯುವ ನೀರು ಒದಗಿಸಲು ತಯಾರಾಗಿರುವ 70-80 ಕೋಟಿ ರೂಪಾಯಿ ವೆಚ್ಚದ ಮೇಳಾಪುರದ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕಾಗಿತ್ತು, ಮತ್ತು ಇದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಾದರೂ ಹೇಳಬೇಕಾಗಿತ್ತು. ಬೆಂಗಳೂರು ನಗರಕ್ಕೆ ಕುಡಿಯುವ ನೀರು ಕೊಟ್ಟರೆ ಇಡೀ ಕರ್ನಾಟಕ ರಾಜ್ಯಕ್ಕೆ ನೀರು ಕೊಟ್ಟ ಹಾಗೆ ಆಗುವುದಿಲ್ಲವೆಂದು ಸರ್ಕಾರ ಮನಗಾಣಬೇಕು. ಇನ್ನು ಪ್ರವಾಸೋದ್ಯಮದ ಬಗ್ಗೆ ಹೇಳುವುದಾದರೆ, ಮೈಸೂರು ಜಿಲ್ಲೆಯಲ್ಲಿ ಕೃಷ್ಣರಾಜೇಂದ್ರ ಸಾಗರವು ಒಂದು ಪ್ರಮುಖ ಮತ್ತು ಹೆಮ್ಮೆಯ ಪ್ರವಾಸಿ ಸ್ಥಳವಾಗಿದೆ. ಅಲ್ಲಿ ಮ್ಯೂಸಿಕಲ್ ಚಿಲುಮೆಗಳೆಲ್ಲಾ ಕೆಟ್ಟು ಹೋಗಿವೆ, ಬಲ್ಬಗಳು ಸರಿಯಾಗಿ ಹತ್ತುವುದೇ ಇಲ್ಲ. ರಾಷ್ಟ್ರಪತಿಗಳು ಅಥವಾ ಪ್ರಧಾನ ಮಂತ್ರಿಗಳು ಬರುವಂಥ ಸಂದರ್ಭದಲ್ಲಿ ಈ ಮ್ಯೂಸಿಕಲ್ ಚಿಲುಮೆಗಳನ್ನು ಸರಿ ಮಾಡುತ್ತಾರೆ, ನಂತರ ಒಂದು ವಾರದೊಳಗೆ ಪುನಃ ಅವು ಕೆಟ್ಟು ಹೋಗುತ್ತವೆ. ಆದ್ದರಿಂದ ಮಾನ್ಯ ಉಪಮುಖ್ಯ ಮಂತ್ರಿಗಳು ಇಲ್ಲಿಗೆ ಭೇಟಿ ನೀಡಿ ಅಲ್ಲಿರುವ ಅವ್ಯವಸ್ಥೆಯನ್ನು ಸರಿಪಡಿಸುವುದರ ಮೂಲಕ ಪ್ರವಾಸಿಗಳು ಬಂದು ಅದನ್ನು ನೋಡಿ ಆನಂದಿಸುವ ಹಾಗೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. 1 ಗಂಟೆಗೆ ಆಯವ್ಯಯ ಮಂಡನೆ ಮಾಡುತ್ತಿರುವುದರಿಂದ ಸಮಯ ಸಾಕಾಗದೆ ಇರುವುದರಿಂದ ಇಷ್ಟು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಸಂತ ವಿ. ಸಾಲಿಯನ (ಕಾಪು) : ಸನ್ಮಾನ್ಯ ಅಧ್ಯಕ್ಷರೆ, 19ನೇ ತಾರೀಖು ಮಾನ್ಯ ರಾಜ್ಯಪಾಲರು ವಿಧಾನ ಸಭೆಯಲ್ಲಿ ಮಾಡಿದ ಭಾಷಣದ ಬಗ್ಗೆ ಒಂದೆರಡು ಮಾತುಗಳನ್ನು ಆಡಬಯಸುತ್ತೇನೆ. ಮೊದಲನೆಯದಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ 1987-88ನೇ ಇಸವಿಯಲ್ಲಿ ಸುಮಾರು 10 ಖಾಸಗಿ ಪ್ರೌಢ ಶಾಲೆಗಳನ್ನು ಮಂಜೂರಿ ಮಾಡಲಾಗಿತ್ತು. ಈ 10 ಖಾಸಗಿ ಪ್ರೌಢ ಶಾಲೆಗಳಿಗೆ ಅನುದಾನ ಸಹಿತ ಎಂದು ಮಂಜೂರಾತಿಯಾಗಿತ್ತು. ಆದರೆ, ಈ ತನಕ ಯಾವುದೇ ಅನುದಾನ ಈ ಪ್ರೌಢ ಶಾಲೆಗಳಿಗೆ ಸರ್ಕಾರದಿಂದ ಸಿಗಲಿಲ್ಲ. ಈ 10 ಖಾಸಗಿ ಪ್ರೌಢಶಾಲೆಗಳಿಗೆ ಅಗತ್ಯವಾಗಿ ಬೇಕಾಂಥ ಉತ್ತಮವಾದ ಜಾಗ,ಉತ್ತಮವಾದ ತರಗತಿ ಕೊಠಡಿಗಳು, ಉತ್ತಮವಾದಂಥ ಅಧ್ಯಾಪಕರುಗಳು ಇದ್ದು, ಪ್ರತಿ ವರ್ಷ ನೂರಕ್ಕೆ ನೂರು ಪರಸೆಂಟೇಜ್ ರಿಸಲ್ಟ ಬರುತ್ತಿದ್ದರೂ ಇದುವರೆಗೂ ಸರ್ಕಾರದಿಂದ ಯಾವುದೇ ರೀತಿಯ ಅನುದಾನ ದೊರಕಲಿಲ್ಲ. ಈಗಲಾದರೂ ಈ ಶಾಲೆಗಳಿಗೆ ಅನುದಾನವನ್ನು ಕೊಡಲೇಬೇಕೆಂದು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ. ಒಂದು ವರ್ಷ ಈ ಶಾಲೆಗಳಿಗೆ ಅನುದಾನವನ್ನು ಸರ್ಕಾರ ಕೊಡದಿದ್ದಲ್ಲಿ ಈ ಶಾಲೆಗಳನ್ನು ನಡೆಸಲು ಸರ್ಕಾರಕ್ಕೇ ಬಿಟ್ಟುಕೊಡುತ್ತೇವೆ. ಈ ತಿಂಗಳಿನಿಂದ ಅಧ್ಯಾಪಕರುಗಳಿಗೆ ಸಂಬಳ ಕೊಡುವುದಕ್ಕೂ ಸಾಧ್ಯವಿಲ್ಲದಂಥ ಪರಿಸ್ಥಿತಿ ಈ ಶಾಲೆಗಳ ಆಡಳಿತ ಮಂಡಳಿಗೆ ಉಂಟಾಗಿದೆ.ಈ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ 100 ಜನ ಅಧ್ಯಾಪಕರುಗಳು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಶಾಸಕರುಗಳೂ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ವಿದ್ಯಾ ಮಂತ್ರಿಗಳಲ್ಲಿ ಅನುದಾನ ಬಿಡುಗಡೆ ಮಾಡಬೇಕೆಂದು ಮನವಿ ಮಾಡಿದ್ದೇವೆ. ಇನ್ನು ಎರಡನೆಯ ವಿಚಾರವೆಂದರೆ,1994ರಲ್ಲಿ 187 ಜನ ಪ್ರೊಬೇಷನರ್ ಪೋಲೀಸ್ ಸಬ್ ಇನ್ಸಪೆಕ್ಟರ್ ಹುದ್ದೆಗೆ ಅಭ್ಯರ್ಥಿಗಳನ್ನು ನೇಮಕ ಮಾಡಲಾಗಿತ್ತು, ಅದರಂತೆ 1994 ಆಗಸ್ಟ ತಿಂಗಳಲ್ಲಿ

ಅವರುಗಳನ್ನು ಮೈಸೂರಿನಲ್ಲಿ ತರಬೇತಿಯನ್ನು ಸಹಾ ಕೊಟ್ಟಿದ್ದಾರೆ. ನಂತರ 1-12-1995 ರಲ್ಲಿ ಹೊಸ ಆಯ್ಕೆ ಪಟ್ಟಿ ಪ್ರಕಾರ ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ 12 ಮಂದಿ ಅಭ್ಯರ್ಥಿಗಳನ್ನು ಆಯ್ಕೆ ಪಟ್ಟಿಯಿಂದ ರದ್ದು ಮಾಡಿದ್ದಾರೆ. ಈ 12 ಜನ ಅಭ್ಯರ್ಥಿಗಳಿಗೆ ತರಬೇತಿಯನ್ನು ಕೊಟ್ಟ ನಂತರ ಏಕೆ ಕೈ ಬಿಡಲಾಯಿತೆಂಬ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿ ನನಗೆ ಉತ್ತರ ಕೊಡಬೇಕೆಂದು ಸನ್ಮಾನ್ಯ ಗೃಹ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಮತ್ತು ನನ್ನ ಕ್ಷೇತ್ರದಲ್ಲಿ ದರೋಡೆಗಳು, ಕೊಲೆಗಳು ನಡೆಯುತ್ತಿವೆ. ಇದರ ಬಗ್ಗೆ ಮಾನ್ಯ ಗೃಹ ಸಚಿವರೊಡನೆ ಚರ್ಚೆ ಮಾಡಿದ್ದೇನೆ ಹಾಗೂ ಈ ದಿವಸ ಕೂಡ ಚರ್ಚೆ ಮಾಡುವವನಿದ್ದೇನೆ. ಇದರ ಬಗ್ಗೆ ಮಾನ್ಯ ಗೃಹ ಸಚಿವರು ಕೂಲಂಕುಷವಾಗಿ ಪರಿಶೀಲನೆ ಮಾಡಬೇಕೆಂದು ತಮ್ಮ ಮುಖೇನ ಮತ್ತೊಮ್ಮೆ ಗೃಹ ಸಚಿವರಲ್ಲಿ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ಆಮೇಲೆ, ದಕ್ಷಿಣ ಕನ್ನಡ ಜಿಲ್ಲೆಯ ನನ್ನ ಕ್ಷೇತ್ರ ಕಾಪುವಿನಲ್ಲಿ ಎರಡು ಪವರ್ ಪ್ರಾಜೆಕ್ಟಗಳು ಬರುತ್ತಿವೆ. ನನ್ನ ಕ್ಷೇತ್ರದ ಒಂದೇ ಮಂಡಲ ಪಂಚಾಯಿತಿ ಕ್ಷೇತ್ರದಲ್ಲಿ ಕೊಜೆಂಟ್ರಿಕ್ಸ ಮತ್ತು ನಾಗಾರ್ಜುನ ಪವರ್ ಪ್ರಾಜೆಕ್ಟಗಳನ್ನು ಮಾಡಲಾಗುತ್ತಿದೆ. ಇದರ ವಿರುದ್ಧವಾಗಿ ರಾಜ್ಯಾದ್ಯಂತ ಅಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಸಾರ್ವಜನಿಕರು, ಮಠಾಧೀಶರು, ರಾಜಕಾರಣಿಗಳು, ಪರಿಸರವಾದಿಗಳು ಪ್ರತಿಭಟನೆ ಮಾಡುತ್ತಿದ್ದಾರೆ. ಕೊಜೆಂಟ್ರಿಕ್ಸ ಪ್ರಾಜೆಕ್ಟ ಒಂದಕ್ಕೇ ಎಂದು ಸಾವಿರ ಎಕರೆಗಳು ಹೋಗುತ್ತಿದೆ. ಈ ಯೋಜನೆಗಳನ್ನು ತೆಗೆದುಕೊಳ್ಳುವ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರತಿನಿಧಿಸತಕ್ಕ ಶಾಸಕರುಗಳ ಜೊತೆಯಾಗಲೀ, ಪಾರ್ಲಿಮೆಂಟ್ ಸದಸ್ಯರ ಜೊತೆಯಲಾಗಲೀ ಚರ್ಚೆ ಮಾಡಿಲ್ಲ. ಈ ದಿವಸ ಈ ಯೋಜನೆಗಳಿಗೆ ಮಂಜೂರಾತಿ ಕೊಟ್ಟಿರಬಹುದು. ಮಂಜೂರಾತಿ ಕೊಟ್ಟ ತಕ್ಷಣ ಆ ಯೋಜನೆಗಳು ಜಾರಿಯಾಗಬೇಕೆಂದೇನೂ ಇಲ್ಲ. ಈ ಯೋಜನೆಗಳನ್ನು ಮಾಡುವ ಬಗ್ಗೆ ಸಾರ್ವಜನಿಕರೊಡನೆ ಮತ್ತು ಜನ ಪ್ರತಿನಿಧಿಗಳೊಡನೆ ಚರ್ಚೆ ಮಾಡಿ ಜನರನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ಕೆಲಸ ಮಾಡಬೇಕಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಸದಸ್ಯರ ಸಲಹೆ ಬಹಳ ಸೂಕ್ತವಾಗಿದೆ. ನಾನು ತಮ್ಮನ್ನೆಲ್ಲಾ ಕರೆಯಿಸಿ ಮಾತನಾಡುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ತಪ್ಪು ತಿಳುವಳಿಕೆಯನ್ನು ಜನರಿಗೆ ಕೊಡಬಾರದು. ಈ ಹಿಂದೆಯೇ ಸೂಪರ್ ಥರ್ಮಲ್ ಪ್ರಾಜೆಕ್ಟನ್ನು ಸೋವಿಯತ್ ಯೂನಿಯನ್ ಕೊಲಾಬರೇಷನಿಂದ 2400 ಎಕರೆಗೆ ಕ್ಲಿಯರನ್ಸ ಕೊಡಲಾಗಿದೆ. ಇಲ್ಲಿ ಬರುವ ನಾಗಾರ್ಜುನ ಪ್ರಾಜೆಕ್ಟನಿಂದ 1 ಸಾವಿರ ಮೆಗಾವಾಟ್ ಮತ್ತು ಕೊಜೆಂಟ್ರಿಕ್ಸ್‌ನಿಂದ 1 ಸಾವಿರ ಮೆಗಾವಾಟ್ ಉತ್ಪಾದನೆಯಾಗುವಷ್ಟು ಏರಿಯಾ ಇದೆ. ಇದಕ್ಕೆ ತಮ್ಮ ಸಹಕಾರವು ಬೇಕು, ಮಠಾಧಿಪತಿಗಳ ಸಹಕಾರವೂ ಬೇಕು. ಈ ಪ್ರಾಜೆಕ್ಟಗೆ ಮಾತ್ರ ಯಾವುದೇ ರೀತಿಯಲ್ಲೂ ಅಡ್ಡಿ ಮಾಡಬಾರದು. ಇದರ ಬಗ್ಗೆ ನಿಮ್ಮೆಲ್ಲರನ್ನೂ ಕರೆದು ಮಾತನಾಡುತ್ತೇನೆ.

ಶ್ರೀ ವಸಂತ ಬಿ. ಸಾಲಿಯಾನ : ಮಾನ್ಯ ಅಧ್ಯಕ್ಷರೆ, ಈ ಎಸ್.ಟಿ.ಪಿ.ಸಿ. ಬರುವ ಬಗ್ಗೆ ಜನರಲ್ಲಿ ತಪ್ಪು ಕಲ್ಪನೆ ಉಂಟಾಗಿದೆ. ಅದೇ ರೀತಿ ಎಂ.ಆರ್.ಪಿ.ಎಲ್ ಆಗುವಾಗಲೂ ಜನ ಸಾಮಾನ್ಯರ ಅಭಿಪ್ರಾಯವನ್ನು ಮತ್ತು ಅವರ ಸಮಸ್ಯೆಯನ್ನು ಸರ್ಕಾರದವರು ಕೇಳಲಿಲ್ಲ. ನಮ್ಮ ಜಿಲ್ಲೆಗೆ ಯಾವುದೇ ಪ್ರಾಜೆಕ್ಟ್‌ಗಳು ಬರಬಾರದೆಂದು ನಾವು ಹೇಳುತ್ತಿಲ್ಲ. ಆದರೆ ಯಾವುದೇ ರೀತಿಯಲ್ಲೂ ಜನ

ಸಾಮಾನ್ಯರಿಗೆ ತೊಂದರೆಯಾಗದ ರೀತಿಯಲ್ಲಿ ಮಾಡುವ ಪ್ರಾಜೆಕ್ಟಗೆ ನಮ್ಮಲ್ಲರ ಬೆಂಬಲ ಇದೆ. ನಮ್ಮ ಜಿಲ್ಲೆಯಲ್ಲಿ ಬಂದಿರುವ ಎಂ.ಆರ್.ಪಿ.ಎಲ್. ವಿರುದ್ಧವಾಗಿ ಕೆಲವು ದಿವಸಗಳ ಹಿಂದೆ ಗಲಭೆಯಾಗಿ ಸುಮಾರು 50 ಲಕ್ಷ ರೂಪಾಯಿಗಳಷ್ಟು ಸಾರ್ವಜನಿಕ ಆಸ್ತಿ ಪಾಸ್ತಿಗೆ ನಷ್ಟವುಂಟಾಗಿದೆ. ಹೋಟೆಲ್‌ಗಳು ಮತ್ತು ಅಂಗಡಿಗಳನ್ನು ಪುಡಿ ಪುಡಿ ಮಾಡಲಾಯಿತು, 9 ರಿಕ್ಷಾಗಳನ್ನು ಸುಟ್ಟುಹಾಕಿದರು. ಈ 9 ರಿಕ್ಷಾಗಳ ಡ್ರೈವರುಗಳು ಇವತ್ತಿನ ದಿವಸ ಕೆಲಸ ಇಲ್ಲದೆ ಪರಿಹಾರಕ್ಕಾಗಿ ಮೂರ್ನಾಲ್ಕು ತಿಂಗಳಿನಿಂದ ಸರ್ಕಾರದ ಮಟ್ಟದಲ್ಲಿ ಓಡಾಡುತ್ತಿದ್ದಾರೆ. ರಿಕ್ಷಾಗಳು ಸುಟ್ಟಿರುವ ಬಗ್ಗೆ ಆರ್.ಟಿ.ಓ. ಅವರು ಸರ್ಕಾರಕ್ಕೆ ವರದಿ ಸಲ್ಲಿಸಿದ್ದರೂ ಇದುವರೆಗೆ ಪರಿಹಾರವನ್ನು ಕೊಟ್ಟಿಲ್ಲ. ಅಂಗಡಿ ಮತ್ತು ಹೋಟೆಲ್ ಸುಟ್ಟ ಹೋದವರಿಗೆ ಈಗಾಗಲೇ 5 ಲಕ್ಷ ಚಿಲ್ಲರೆ ಹಣವನ್ನು ಪರಿಹಾರವಾಗಿ ಕೊಟ್ಟಿದ್ದಾರೆ, ಅದೇ ರೀತಿ ಈ ರಿಕ್ಷಾ ಸುಟ್ಟುಹೋದ ಬಗ್ಗೆ ಆ ಡ್ರೈವರುಗಳಿಗೆ ಪರಿಹಾರ ಕೊಡಬೇಕೆಂದು ಈ ಮೂಲಕ ಒತ್ತಾಯ ಮಾಡುತ್ತೇನೆ. ಇನ್ನೂ ಅನೇಕ ವಿಷಯಗಳನ್ನು ಹೇಳುವುದಿತ್ತು, ಆದರೆ ಸಮಯ ಅಭಾವವಿರುವುದರಿಂದ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಕೊಚ್ಚಿಂಟಿಕ್ಷ ಬಗ್ಗೆ ರಿವೈಸ್ಡ ಪಿ.ಪಿ.ಎ.ಯನ್ನು ಕ್ಯಾಬಿನೆಟ್ ಅಪ್ರೂವ್ ಮಾಡಿದೆಯೆಂದು ಗೊತ್ತಾಗಿದೆ. ಅದರ ಕಾಪಿಯನ್ನು ನಮಗೆ ಒದಗಿಸಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಮೊಯಿಲಿಯವರ ಸರ್ಕಾರ ಇದ್ದಾಗ ಏನು ಪಿ.ಪಿ.ಎ. ಮಾಡಲಾಗಿತ್ತೋ ಅದನ್ನು ವಿವರಣಾತ್ಮಕವಾಗಿ ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿಗೆ ಕಳುಹಿಸಿಕೊಡಲಾಗಿದೆ. ಅದರ ಕಾಪಿಯನ್ನು ತಮಗೆ ಕಳುಹಿಸಿಕೊಡುತ್ತೇನೆ.

+ ಶ್ರೀ ಸಿ.ಹೆಚ್ ವಿಜಯಶಂಕರ್ (ಹುಣಸೂರು) : ಸನ್ಮಾನ್ಯ ಸಭಾಧ್ಯಕ್ಷರೆ,ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಪ್ರಾರಂಭವಾಗುವಂಥ ಮೊದಲನೆ ವಿಚಾರವೇನೆಂದರೆ, ಸನ್ಮಾನ್ಯ ಮುಖ್ಯ ಮಂತ್ರಿಗಳಾದ ದೇವೇಗೌಡರು ಕೈಗೊಂಡ ಜನತಾ ದರ್ಶನದ ವಿಷಯವಾಗಿ ಪ್ರಾರಂಭವಾಗುತ್ತದೆ. ಮಾನ್ಯ ದೇವೇಗೌಡರು ಇಡೀ ರಾಜ್ಯದ್ಯಂತ ಮಾಡಿರುವ ಜನತಾ ದರ್ಶನವನ್ನು ನಾನು ಸ್ವಾಗತ ಮಾಡುತ್ತೇನೆ. ಈ ಜನತಾ ದರ್ಶನದಲ್ಲಿ ರಾಜ್ಯದ ಬಹಳಷ್ಟು ಮಂದಿ ಮಹಿಳೆಯರು ಮಾನ್ಯ ಮುಖ್ಯ ಮಂತ್ರಿಗಳ ಮುಂದೆ ಸೆರೆಗೊಡ್ಡಿ ಬೇಡಿದ್ದೇನೆಂದರೆ, ಮೊದಲು ಸಾರಾಯಿಯನ್ನು ನಿರ್ಮೂಲ ಮಾಡಿ ನಮ್ಮ ಸಂಸಾರಕ್ಕೆ ನೆಮ್ಮದಿಯನ್ನು ಕೊಡಿ ಹಾಗೂ ಗ್ರಾಮಗಳಲ್ಲಿ ಮುಕ್ತ ವಾತಾವರಣದ ಅವಕಾಶವನ್ನು ಮಾಡಿಕೊಡಿ ಎನ್ನುವ ಬೇಡಿಕೆಯನ್ನು ಮುಖ್ಯ ಮಂತ್ರಿಗಳು ಕೈಗೊಂಡ ಎಲ್ಲಾ ಜನತಾ ದರ್ಶನದಲ್ಲಿ ಮಹಿಳೆಯರು ಸೆರೆಗೊಡ್ಡಿ ಬೇಡಿಕೊಂಡಿದ್ದಾರೆ. ಈ ಸಾರಾಯಿ ಬಾಬಿನಿಂದ ಸರ್ಕಾರಕ್ಕೆ 850 ಕೋಟಿ ರೂಪಾಯಿಗಳ ಆದಾಯ ಬರುತ್ತದೆಂದು ಸರ್ಕಾರ ಹೇಳುತ್ತದೆ. ಈ ಹಣದಲ್ಲಿ ಸಾರ್ವಜನಿಕರ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆಂದು ಸಹಾ

ತಿಳಿಸಲಾಗಿದೆ. ಬಡ ಕುಟುಂಬದವರ ಸಮೃದ್ಧಿ ಹಾಳು ಮಾಡುವ ಈ ಸಾರಾಯಿಯನ್ನು ಬಂದ್ ಮಾಡುವುದರ ಮೂಲಕ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಈ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇನ್ನು ಎಂಡಸಲ್ಫಾನ್ ಬಗ್ಗೆ ಹೇಳುವುದಾದರೆ, ಮಾನ್ಯ ದೇವೇಗೌಡರ ಸರ್ಕಾರ ಬಂದ ಮೇಲೆ ಗ್ರಾಮೀಣಾಭಿವೃದ್ಧಿಗಾಗಿ ಹಣವನ್ನು ವಿನಿಯೋಗವಾಗುತ್ತದೆಂದು ನಾನು ತಿಳಿದುಕೊಂಡಿದ್ದೆ. ಆದರೆ, ಆ ರೀತಿ ಮಾಡದೆ ಇವರು ಬಹು ರಾಷ್ಟ್ರೀಯ ಕಂಪೆನಿಗಳ ಪರವಾಗಿ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಭಾರತ ದೇಶ ಹಳ್ಳಿಗಳ ನಾಡು, ಹಳ್ಳಿಗಳು ಉದ್ಧಾರವಾಗುವವರೆಗೂ ಈ ದೇಶದ ಉದ್ಧಾರವಾಗುವುದಿಲ್ಲವೆಂದು ಪೂಜ್ಯ ಮಹಾತ್ಮಗಾಂಧೀಜಿಯವರು ಕನಸುಕಂಡಿದ್ದರು. ಗ್ರಾಮೀಣ ಮಟ್ಟದ ಉದ್ಧಾರದೊಂದಿಗೆ ರಾಮರಾಜ್ಯದ ಕಲ್ಪನೆಯನ್ನು ಮಹಾತ್ಮಗಾಂಧೀಜಿಯವರು ಇಟ್ಟುಕೊಂಡಿದ್ದರು. ಗ್ರಾಮೀಣ ಮಟ್ಟದ ಗುಡಿಕೈಗಾರಿಕೆಗಳು ಯಾವುದಿವೆ, ಕಮ್ಮಾರಿಕೆ ಆಗಬಹುದು, ಕುಂಬಾರಿಕೆ ಆಗಬಹುದು ನೇಕಾರಿಕೆ ಆಗಬಹುದು, ಮರಗೆಲಸವಾಗಬಹುದು ಇಂಥಾ ಗುಡಿ ಕೈಗಾರಿಕೆಗಳು ಗ್ರಾಮ ಮಟ್ಟದಲ್ಲಿ ಬೆಳೆದು ಬರಬೇಕು ತನ್ಮೂಲಕ ಆ ಜನರ ಆರ್ಥಿಕ ಶಕ್ತಿ ಸುಧಾರಣೆಯಾಗಬೇಕು. ತನ್ಮೂಲಕ ಈ ನಾಡು ಉದ್ಧಾರವಾಗಬೇಕೆನ್ನುವುದು ಗಾಂಧೀಜಿ ಕಂಡಂಥ ಕನಸು.

12.30 ಪಿ.ಎಂ.

ಇವೊತ್ತು ಸಣ್ಣ ಕೈಗಾರಿಕೆಗಳ ಮೂಲಕ ಅಲ್ಲೊಂದು ಇಲ್ಲೊಂದು ಸಣ್ಣ ಕಟ್ಟಡಗಳನ್ನು ಕಟ್ಟಿರಬಹುದು. ನನ್ನ ತಾಲ್ಲೂಕಿನಲ್ಲಿಯೂ ಅಂಥ ಅನೇಕ ಕಟ್ಟಡಗಳನ್ನು ಕಟ್ಟೀದ್ದೀರಿ. ಒಂದು ಕಟ್ಟಡವೂ ಕೂಡ ಸಣ್ಣ ಕೈಗಾರಿಕೆಯ ಕೆಲಸಗಳು ನಡೆಯುತ್ತಿಲ್ಲ. ಗ್ರಾಮೀಣ ಮಟ್ಟದ ಕೈಗಾರಿಕೆಗಳನ್ನು ಮೇಲಕ್ಕೆ ತರುವುದರಲ್ಲಿ ರಾಜ್ಯಪಾಲರ ಭಾಷಣದಲ್ಲಿ ಯಾವುದೇ ಚಿಂತನೆಯನ್ನು ಕಾಣಲಿಲ್ಲ. ಎ.ಪಿ.ಎಂ.ಸಿಗಳನ್ನು ನೀವು ಇಟ್ಟುಕೊಂಡಿದ್ದೀರಿ. ಮೊದಲನೆಯದಾಗಿ ರೈತರಿಗೆ ಅಗತ್ಯವಾಗಿರತಕ್ಕಂಥ ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತಿದ್ದೇವೆಯೇ ಎನ್ನತಕ್ಕಂಥಾದ್ದು. ಅಗತ್ಯ ಸೌಕರ್ಯಗಳಲ್ಲಿ ಕುಡಿಯುವ ನೀರು ಆಗಬಹುದು, ರಸ್ತೆಗಳ ವಿಚಾರ ಆಗಬಹುದು, ಶಾಲೆಗಳ ವಿಚಾರವೇ ಆಗಬಹುದು ಆರೋಗ್ಯಕೀಯ ಸೌಲಭ್ಯಗಳ ವಿಚಾರವೇ ಆಗಬಹುದು, ಗ್ರಾಮೀಣಮಟ್ಟದಲ್ಲಿ ಕೇಳುವಂಥ ನಿವೇಶನದ ವಿಚಾರವೇ ಆಗಬಹುದು. ನಾನು ಶಾಸಕನಾಗಿ 13 ತಿಂಗಳು ಕಳೆದರೂ ಕೂಡ ಇವೊತ್ತಿಗೂ ಒಂದು ವ್ಯವಸ್ಥಿತವಾದಂಥ ನಿವೇಶನಗಳನ್ನು ಮಾಡಿಕೊಳ್ಳಲು ನಮ್ಮಲ್ಲಿ ಸಾಧ್ಯವಾಗಲಿಲ್ಲ. ಈ ರೀತಿಯಾಗಿ ಗ್ರಾಮೀಣ ಬದುಕಿಗೆ ಅಗತ್ಯ ಸೌಲಭ್ಯವೆಂದು ನಾವೇನು ಕರೆಯುತ್ತೇವೆ, ಅವುಗಳನ್ನು ನಾವು ಕಡ್ಡಾಯವಾಗಿ ಪೂರೈಸುತ್ತೇವೆ ಎಂಬ ಭರವಸೆಯನ್ನು ನಾನು ಕಾಣಲಿಲ್ಲ. ಹೋಗಲಿ, ಅವನಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಲು ನಿಮ್ಮಿಂದ ಸಾಧ್ಯವಾಗದಿದ್ದರೂ ಅವನು ಬೆಳೆದಂಥ ಬೆಳೆಗಳಿಗೆ ಸೂಕ್ತವಾದ ಮಾರುಕಟ್ಟೆಯನ್ನು ಒದಗಿಸಿಕೊಡುವ ಚಿಂತನೆ ನಿಮ್ಮಲ್ಲಿ ಇದೆಯೇ? ನಮ್ಮ ತಾಲ್ಲೂಕಿನಲ್ಲಿ ಹತ್ತಿ, ಹುರುಳಿ, ಹುಚ್ಚೆಳ್ಳು, ಕಪ್ಪುಎಳ್ಳು, ರಾಗಿ ಮುಂತಾಗಿ ಬೆಳೆಯುತ್ತೇವೆ. ಇವು ಯಾವುದಕ್ಕೂ ಒಂದು ವ್ಯವಸ್ಥಿತವಾದ ಮಾರುಕಟ್ಟೆ ಇಲ್ಲ. ಎಪಿಎಂಸಿ ಇದ್ದರೆ ಅದು ಹೆಸರಿಗೆ ಮಾತ್ರವೇ ಹೊರತು ರೈತರು ಬೆಳೆದ ಬೆಳೆಗಳಿಗೆ ಯೋಗ್ಯವಾದ

ಮಾರುಕಟ್ಟೆಯನ್ನು ಕೊಡುವಂಥ ವ್ಯವಸ್ಥೆ ಅಲ್ಲಿ ಇನ್ನೂ ಆಗಲಿಲ್ಲ. ನನ್ನ ತಾಲ್ಲೂಕಿನ ಒಂದು ಉದಾಹರಣೆಯನ್ನು ತಮ್ಮ ಗಮನಕ್ಕೆ ತರುವುದಾದರೆ ಹೆಚ್ಚಾಗಿ ಹತ್ತಿಯನ್ನು ಬೆಳೆಯುತ್ತಾರೆ. ಆದರೆ ಅಲ್ಲಿ ಯೋಗ್ಯವಾದ ಮಾರುಕಟ್ಟೆ ಇಲ್ಲ. ಅರಿಶಿನ ಬೆಳೆಯುತ್ತೇವೆ, ಅದಕ್ಕೆ ಯೋಗ್ಯವಾದ ಮಾರುಕಟ್ಟೆ ಇಲ್ಲದೆ ತಮಿಳುನಾಡಿಗೆ ತಗೆದುಕೊಂಡು ಹೋಗುತ್ತಾ ಇದ್ದೇವೆ. ಕಬ್ಬನ್ನು ಬೆಳೆಯುತ್ತೇವೆ. ಕಬ್ಬನ್ನು ಪೂರ್ಣ ಪ್ರಮಾಣದಲ್ಲಿ ಎಲ್ಲಿಯೂ ಅರೆಯುವ ವ್ಯವಸ್ಥೆ ಇಲ್ಲದೆ ರೈತರುಗಳು ಕಂಗಾಲಾಗಿದ್ದಾರೆ. ಈ ರೀತಿಯಲ್ಲಿ ರೈತರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗಲಿಲ್ಲ. ರೈತರು ಬೆಳೆದಂಥ ಬೆಳೆಗಳಿಗೆ ಸೂಕ್ತ ಮಾರುಕಟ್ಟೆಯನ್ನು ಒದಗಿಸಲು ಸಾಧ್ಯವಾಗಲಿಲ್ಲ. ರೈತರ ಮನೆಯ ಮುಂದಿರುವ ಕೆರೆಗಳ ಹೂಳು ಎತ್ತುವಂಥಾದ್ದು, ಒಡ್ಡು ದೂರಸ್ತಿ ಮಾಡುವಂಥಾದ್ದು, ಮುಂತಾದ ಕೆಲಸವನ್ನು ಮಾಡಲು ಕೂಡ ಯಾವುದೇ ಕ್ರಮ ಜರುಗಿಸಿಲ್ಲ. ಕಳೆದ ಸಾಲಿನಲ್ಲಿ ಹೂಳು ಎತ್ತುವಂಥ ಕೆಲಸವನ್ನು ಸಣ್ಣ ನೀರಾವರಿ ಯೋಜನೆಯಡಿಯಲ್ಲಿ ಈ ಸರಕಾರದವರು ಮಾಡಿಸಿಲ್ಲ. ಈ ರೀತಿಯಾಗಿ ಯಾವುದೇ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಆಗದ ಸರಕಾರದವರು ಗ್ರಾಮೀಣ ಮಟ್ಟದಲ್ಲಿ ಯಾವ್ಯಾವ ಕೆಲಸಗಳನ್ನು ಮಾಡಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಗ್ರಾಮೀಣ ಮಟ್ಟದಲ್ಲಿ ಚಿಂತನೆ ಮಾಡುವಂಥ ಸರಕಾರಕ್ಕೆ ಅವರಿಗೆ ಕುಡಿಯುವ ನೀರು ಕೊಡಲು ಆಗಲಿಲ್ಲ, ವಿದ್ಯುಚ್ಛಕ್ತಿಯನ್ನು ಕೊಡಲು ಆಗಲಿಲ್ಲ. ನಮ್ಮ ರೈತುರುಗಳ ಪಂಪ್ ಸೆಟ್‌ಗಳಿಗೆ ವಿದ್ಯುತ್‌ನ್ನು ಕೊಡಲು ಸಾಧ್ಯವಾಗದ ಸರಕಾರ ಬಹುರಾಷ್ಟ್ರೀಯ ಕಂಪನಿಗಳನ್ನು ಆಹ್ವಾನಿಸುತ್ತದೆ. ಇವರಿಂದ ಮುಂದೆ ಯಾವ ರೀತಿಯ ಸಮಸ್ಯೆಗಳನ್ನು ಹುಟ್ಟು ಹಾಕಲು ಈ ಸರಕಾರ ಹೆಜ್ಜೆ ಇಟ್ಟಿದೆ ಎಂಬುದನ್ನು ನಾವು ಚಿಂತನೆ ಮಾಡಬೇಕಾದಂಥ ಸಂದರ್ಭ ಉಂಟಾಗಿದೆ. ಆದ್ದರಿಂದ ಇನ್ನು ಅನ್ನು ಮುಂದಿನ ದಿನಗಳಾಲ್ಲಾದರೂ ಕೂಡ ಗ್ರಾಮೀಣ ಮಟ್ಟದಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಸರಕಾರದವರು ಸೂಕ್ತ ಚಿಂತನೆಯನ್ನು ಪ್ರಾರಂಭ ಮಾಡಬೇಕು. ಯೋಗ್ಯವಾದ ಮೂರುಕಟ್ಟೆಯನ್ನು ಒದಗಿಸಿಕೊಡಬೇಕು. ಸಣ್ಣ ನೀರಾವರಿಗೆ ಅತ್ಯಂತ ಹೆಚ್ಚಿನ ಮಾನ್ಯತೆಯನ್ನು ಒದಗಿಸಿಕೊಡಬೇಕು. ನೀವು ಘೋಷಣೆ ಮಾಡಿದ ಹಾಗೆ ಒಂದು ಲಕ್ಷ ಉದ್ಯೋಗ ವನ್ನು ಈ ನಾಡಿನ ಜನರಿಗೆ ಕೊಡಲಾಗದಿದ್ದರೂ ಚಿಂತೇ ಇಲ್ಲ. ಕನಿಷ್ಟ 50 ಸಾವಿರ ಉದ್ಯೋಗಗಳನ್ನಾದರೂ ಒಂದು ವರ್ಷದಲ್ಲಿ ಕೊಡುವುದಕ್ಕೆ ಭರವಸೆಯನ್ನು ಕೊಡಬೇಕು. ಲಕ್ಷ ಉದ್ಯೋಗ, ಲಕ್ಷ ಭಾವಿಗಳು, ಮುಂತಾಗಿ ಯಾವ ಯೋಜನೆಗಳೂ ನಮ್ಮಲ್ಲಿ ಸರಿಯಾಗಿ ಕಾರ್ಯವಾಗುವುದಿಲ್ಲ. ಅಂಥ ಭರವಸೆಯು ಈಡೇರುವುದನ್ನು ನಾವು ಕಾಣುವಂತಿಲ್ಲ. ಬಡವರಿಗೆ ನಿವೇಶನಗಳು ಸಿಗುತ್ತದೆಂಬ ಭರವಸೆಯು ಕೂಡ ಈಡೇರುವ ಹಾಗೆ ಕಾಣುವುದಿಲ್ಲ. ಇಂಥ ಅನೇಕ ವಿಚಾರಗಳನ್ನು ಹೇಳಲು ಕಾಲಾವಕಾಶದ ಕೊರತೆ ಇರುವುದರಿಂದ ಎಲ್ಲಾ ವಿಚಾರಗಳನ್ನು ಕೈಬಿಟ್ಟು ಗ್ರಾಮೀಣ ಜನರಿಗೆ ಯಾವ ಭರವಸೆಗಳನ್ನು ಕೊಟ್ಟು ತಾವೇನು ಅಧಿಕಾರಕ್ಕೆ ಬಂದಿದ್ದೀರಿ, ಆ ಕಾರಣಕ್ಕೂಸ್ಕರ ಅವರ ಬೇಡಿಕೆಗೆ ಅತೀ ಪ್ರಾಮುಖ್ಯತೆಯನ್ನು ಕೊಡಲೇಬೇಕು. ಅವರ ಬವಣೆ ನೀಗಲು ನಾವು ಗಮನವನ್ನು ಕೊಡಬೇಕು. ಇವೊತ್ತು ಗ್ರಾಮೀಣ ಬದುಕು ಒಂದು ಶಾಪ ಎಂಬ ವಾತಾವರಣ ನಿರ್ಮಾಣವಾಗಿದೆ, ಅವರ ಬವಣೆಯನ್ನು ನೀಗಿಸಲು ನಾವು ನೀವು ಸೇರಿ ಕನಿಷ್ಟ ಗಮನವನ್ನು ಕೊಟ್ಟಲ್ಲಿ ಮಾತ್ರ ನಾವು ನೀವು ಇಲ್ಲಿ ಬಂದು ಅವರ ಮತ ಪಡೆದು ಅಧಿಕಾರ ನಡೆಸಿದುದಕ್ಕೆ ಸಾರ್ಥಕವಾಗುತ್ತದೆ ಎಂಬ ಮಾತನ್ನು ಹೇಳ ಬಯಸುತ್ತೇನೆ. ಆದ್ದರಿಂದ ನಾವುಗಳು ಇಲ್ಲಿ ಬಂದು ಆ

ಕೆಲಸವನ್ನು ಮಾಡಬೇಕೆಂದು ಹೇಳುವ ಏಕೈಕ ಬೇಡಿಕೆಯನ್ನು ಸರಕಾರದ ಗಮನಕ್ಕೆ ತಮ್ಮ ಮೂಲಕ ಇಟ್ಟು ಇನ್ನು ಮುಂದಾದರೂ ಸರಕಾರದವರು ಈ ಬಗ್ಗೆ ಸೂಕ್ತ ಯೋಜನೆಗಳನ್ನು ಹಾಕಿಕೊಂಡು ಕಾರ್ಯಗತಗೊಳಿಸಬೇಕು, ಅಂಥ ಯೋಜನೆಗಳನ್ನು ತಯಾರು ಮಾಡುವಂಥ ಸಮಯದಲ್ಲಿ ಗ್ರಾಮೀಣ ಜನರಿಗೆ ಬೇಕಾಗುವ ಅಗತ್ಯಸೌಲಭ್ಯಗಳು, ಗ್ರಾಮೀಣಮಟ್ಟದ ಉತ್ಪಾದನೆಗಳು ಮತ್ತು ಗ್ರಾಮಾಂತರಕ್ಕೆ ಬೇಕಾಗುವ ಯಾವ ಸೇರಾವರಿ ಕೆಲಸಗಳು ಇವೆ ಅವುಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು, ಶಾಲೆಗಳ ಬಗ್ಗೆ ಅಗತ್ಯ ಗಮನ ಕೊಡಬೇಕು, ಅಂತೆಯೇ ಅಗತ್ಯ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ನನ್ನ ತಾಲ್ಲೂಕು ಒಂದರಲ್ಲಿಯೇ 10-12 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವೈದ್ಯರಿಲ್ಲ. ಅಂಥ ಕಡೆಗಳಲ್ಲಿ ಕೂಡಲೇ ವೈದ್ಯರುಗಳನ್ನು ನೇಮಕ ಮಾಡಬೇಕು. ಒಟ್ಟಿನಲ್ಲಿ ಗ್ರಾಮೀಣ ಮಟ್ಟದ ಬದುಕಿಗೆ ಹೆಚ್ಚು ಒತ್ತನ್ನು ಕೊಡತಕ್ಕಂಥ ಒಂದು ಚಿಂತನೆಯನ್ನು ಮಾಡಿ ಅದನ್ನು ಸೂಕ್ತರೀತಿಯಲ್ಲಿ ಕಾರ್ಯಗತ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಈ ಕೆಲಸವನ್ನು ಮಾನ್ಯ ದೇವೇಗೌಡರ ಸರಕಾರದವರು ಮಾಡಬೇಕೆಂದು ಕೆಲವು ಸಲಹೆಗಳನ್ನು ತಮ್ಮಮೂಲಕ ಕೊಟ್ಟಿರುತ್ತೇನೆ. ಇದಕ್ಕೆ ಅವಕಾಶ ಕೊಟ್ಟ ತಮಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸದನವನ್ನು ಮುಂದೂಡಲಾಗಿದೆ. ಪುನಃ ಆಯವ್ಯಯ ಮಂಡನೆಗಾಗಿ ಒಂದು ಗಂಟೆಗ ಸಮಾವೇಶಗೊಳ್ಳುತ್ತದೆ.

(ಸಭೆಯು ಪುನಃ 1-00 ಗಂಟೆಗೆ ಸಮಾವೇಶಗೊಂಡಿತು. ಅಧ್ಯಕ್ಷರು ಪೀಠವನ್ನು - ಅಧ್ಯಕ್ಷರಾದ ಶ್ರೀ ರಮೇಶ್ ಕುಮಾರ್ ಅವರು ಅಲಂಕರಿಸಿದ್ದರು).

ವಿತೀಯ ಕಾರ್ಯಕಲಾಪಗಳು

1996-97ನೇ ಸಾಲಿನ ಆಯವ್ಯಯ ಪತ್ರದ ಮಂಡನೆ

ಅಧ್ಯಕ್ಷರು : 1996-97ನೇ ಸಾಲಿನ ಆಯವ್ಯಯವನ್ನು ಮಾನ್ಯ ಹಣಕಾಸು ಸಚಿವರಾದ ಶ್ರೀ ಸಿದ್ಧರಾಮಯ್ಯನವರು ಸಭೆಯ ಮುಂದೆ ಮಂಡಿಸುವುದು.

ಅಧ್ಯಕ್ಷರು : ಈಗ ಸದನವನ್ನು ಮುಂದೂಡಿ ಪುನಃ ನಾಳೆ ಬೆಳಿಗ್ಗೆ 10.00 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ಮಧ್ಯಾಹ್ನ 2 ಗಂಟೆ 27 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 5ನೇ ಮಾರ್ಚ್ ಮಾಹೆ 1996ರ ಮಂಗಳವಾರದಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)